ಇಲ್ಲದೆ ಮಕ್ಕಳ ಜಗತ್ತನ್ನ ಊಹಿಸಿಕೊಳ್ಳುವುದೇ ಕಷ್ಟ. ನಮ್ಮ ಇಂಗ್ಲಿಷಿನಲ್ಲಿ ಹೊಸಗಾಲದ ಫ್ಯಾಂಟಸಿ ಅಚ್ಚರಿಗೊಳಿಸುವಂತೆ ಬರುತ್ತಿದೆ. ನಮ್ಮ ಕನ್ನಡದಲ್ಲಿ ಅದೇಕೋ ಹಿಂಜರಿಕೆ. ನನಗಂತೂ ಅದು ಬಲು ಪ್ರಿಯವಾದ ಸಂಗತಿ. ದೆವ್ವಭೂತಗಳ ಕತೆಗಳು ಇರಲಿ ಬಿಡ್ರಿ, ರಸ್ಕಿನ್ ಬಾಂಡ್ ಇಂಥವನ್ನ ಸಾಕಷ್ಟು ಬರೆದಿದ್ದಾರೆ! ನಮ್ಮ ಕನ್ನಡದ ಹುಣಸೂರಿನ ಮಾದುಪ್ರಸಾದ 'ತೊಟ್ಟಿಲಗೊಂಬೆ' ಕಾದಂಬರಿಯಲ್ಲಿ ಎಷ್ಟು ಚೆಂದವಾಗಿ ತಂದಿದ್ದಾರೆ. ಅದ್ಯಾವುದೂ ಮೂಢನಂಬಿಕೆಗೆ ದೂಡುವುದಲ್ಲ. ನೀತಿ ಎಲ್ಲರಿಗೂ ಬೇಕು, ಅದರ ಅಗತ್ಯ ಸಹಜವಾಗಿ ನಮ್ಮ ಬದುಕಿನ ಅನುಭವದಿಂದ ತನ್ನತಾನೇ ಹೊಮ್ಮುವಂತಿರಬೇಕು. ನೇರವಾಗಿ ಉದ್ದೇಶಪಟ್ಟು ಹೇಳಬಹುದು, ಅದು ಕಲೆಯಿಂದ ಅಚೆಯದು.

**◆ ಪಾಶ್ಚಾತ್ಯರ ಅಭಿಪ್ರಾಯಗಳನ್ನ ಪದೇ ಪದೇ ಉದ್ಧರಿಸುವ ನಿಮಗೆ ಭಾರತೀಯ ಭಾಷೆಯ ತುಲನೆಯಲ್ಲಿ ಅದು ತೀರಾ ಅಗತ್ಯದ್ದು ಅನಿಸಿರೋ ಹಾಗಿದೆ...**

ಹೌದು, ಮಾರುಕಟ್ಟೆಯ ಅನುಕೂಲವಿರಬಹುದು, ಅಲ್ಲಲ್ಲಿನ ವಾತಾವರಣವಿರಬಹುದು... ಪಾಶ್ಚಾತ್ಯರು ಮಕ್ಕಳ ಸಾಹಿತ್ಯಕ್ಕೆ ಸಾಕಷ್ಟು ತೆರೆದುಕೊಂಡಿದ್ದಾರೆ. ಅಲ್ಲಿ ಬರವಣಿಗೆ ದಂಡಿಯಾಗಿ, ವೈವಿಧ್ಯದಿಂದ ಕೂಡಿದುದಾಗಿ ಕಾಣುವಂತೆ, ಈ ರಂಗವನ್ನು ಗಂಭೀರವಾಗಿ ಅಧ್ಯಯನ ಮಾಡುವ, ಚರ್ಚಿಸುವ, ವಿಮರ್ಶಿಸುವ ಮನಸ್ಸುಗಳು ಪದೇ ಪದೇ ಕಾಣಿಸಿವೆ. ವಿಶ್ವವಿದ್ಯಾಲಯಗಳಲ್ಲಿ ಅಗತ್ಯದ್ದಾಗಿ ಮಕ್ಕಳ ಸಾಹಿತ್ಯದ ಅಧ್ಯಯನ ನಡೆಯುತ್ತಿದೆ, ಪಿಎಚ್.ಡಿ. ಪ್ರಬಂಧಗಳು ಅವಶ್ಯವಾಗಿ ನೋಡುವಂತಿವೆ. ಈ ಬಗೆಯ ಚಟುವಟಿಕೆ ನಮ್ಮ ನಡುವೆ ಆಗುತ್ತಿಲ್ಲ. ವಯಸ್ಕರ ಸಾಹಿತ್ಯಕ್ಕೆ ಹೋಲಿಸಿದರೆ ನಮ್ಮಲ್ಲಿ ಮಕ್ಕಳ ಸಾಹಿತ್ಯವೇ ವಿಪುಲವಾಗಿ ಬರಲಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಮಕ್ಕಳ ಸಾಹಿತ್ಯವನ್ನು ಗೌಣವಾಗಿ ಕಾಣುವುದೇ ಸರ್ವೇಸಾಮಾನ್ಯವಾಗಿದೆ. ಹೀಗಿರುವಾಗ ವಿಸ್ತೃತ ಓದಿನ ಹಂಬಲವಿರುವವರಿಗೆ ಎಲ್ಲೆಲ್ಲಿ ಉಣಿಸು ಸಿಗುತ್ತದೊ ಅತ್ತ ಹೊರಳುವುದು ಸಹಜ. ಅಲ್ಲಿ ವಿದ್ವಾಂಸರು ಮಕ್ಕಳ ಸಾಹಿತ್ಯದ ಕುರಿತು ಮಾತನಾಡುವಾಗಲೆಲ್ಲ ದ್ವಂದ್ವಗಳನ್ನ ಮುಂದಿಟ್ಟುಕೊಂಡೇ ತೊಡಗಿಕೊಳ್ಳುತ್ತಿರುವುದನ್ನು ನಾನು ನೋಡುತ್ತಿದ್ದೇನೆ, ಅದು ಜೀವಂತಿಕೆಯ ಸಂಕೇತ. ಇಸ್ರೇಲ್‌ನ ಟೆಲ್ ಅವಿವಾ ವಿಶ್ವವಿದ್ಯಾಲಯದಲ್ಲಿ ಈ ಬಗೆಯ ದ್ವಂದ್ವವನ್ನು, ವಯಸ್ಕರ ಸಾಹಿತ್ಯದ ವಲಯ ನಡೆದುಕೊಳ್ಳುತ್ತಿರುವುದನ್ನು ಮುಂದಿಟ್ಟುಕೊಂಡೇ ಜೋಹರ್ ಶೆವಿಟ್ ಎನ್ನುವವರು ಸಂಶೋಧನಾ ಪ್ರಬಂಧ ಬರೆದಿದ್ದಾರೆ, ಅದು ಮಕ್ಕಳ ಸಾಹಿತ್ಯಾಸಕ್ತರೆಲ್ಲಾ ಅಗತ್ಯವಾಗಿ ಗಮನಿಸುವಂತಿದೆ. ಪೌರ್ವಾತ್ಯ ಸಾಹಿತ್ಯ ಭಾಷೆಯ ದೆಸೆಯಿಂದ ನಮಗೆ ತಲುಪುತ್ತಿಲ್ಲ.

**◆ ಮಕ್ಕಳ ಸಾಹಿತ್ಯದಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದೀರಿ. ಈ ಪ್ರಯತ್ನಕ್ಕೆ ತಕ್ಕ ಪ್ರತಿಕ್ರಿಯೆ–ಸ್ಪಂದನ ನಿಮ್ಮ ಪರಿಸರದಿಂದ ವ್ಯಕ್ತವಾಗಿದೆಯೆ?**

ಈಗಾಗಲೇ ಹೇಳಿದಹಾಗೆ ನಿರಾಸೆಗಳಿರುತ್ತವೆ. ಬದುಕಿನಲ್ಲಿ ಹಲವಂದದ ನಿರಾಸೆಗಳು ಎದುರಾಗುತ್ತಿರುತ್ತವೆ. ಅವುಗಳಿಂದ ಕುಗ್ಗುವುದಕ್ಕಿಂತ – ನನಗೆ ಬೇಕಿದೆ, ಸಾಧ್ಯವಾದ ಕೆಲಸದಲ್ಲಿ ತೊಡಗಿಕೊಳ್ಳುವುದು ಅಂತ ಮುಂದೆ ಸಾಗುವುದೇ ವಾಸಿ ಅನಿಸಿದೆ. ಮಕ್ಕಳ ಸಾಹಿತ್ಯವನ್ನ ಯಾರೆಷ್ಟೇ ವೇದಿಕೆಯಲ್ಲಿ ಔಪಚಾರಿಕವಾಗಿ ಮಾತಾಡಿದರೂ ಗೌಣವಾಗಿ ನೋಡುತ್ತಿರುವುದೇ ನಮ್ಮ ನಡುವೆ ಹಾಸಿಕೊಂಡಿದೆ. ಕನ್ನಡದಾಚೆ ಬೇರೆ ಭಾಷಿಕರಿಂದ ಎಷ್ಟೋ ಸಲ ನನಗೆ ಬಲ ಸಿಗುತ್ತಿದೆ. ಕೆಲವರಾದರೂ ಆಸಕ್ತಿಯುಳ್ಳವರು ಸಿಗುತ್ತಾರೆ. ನನ್ನ ಸುತ್ತ ವಿರಳವಾಗಿಯಾದರೂ ಕೆಲವು ಯುವಕರ ಬಳಗವಿದೆ. ನಾಡಿನ ತುಂಬಾ ಸಾಕಷ್ಟು ಕಾರ್ಯಕ್ರಮ ಹಾಕಿಕೊಳ್ಳುತ್ತಾ ಬಂದಿದ್ದೇವೆ. ಅದೇ ಒಂದು ಸುಖದ ಅನುಭವ.

**◆ ಮಕ್ಕಳ ಸಾಹಿತ್ಯಕ್ಕೆ ಪ್ರತ್ಯೇಕ ವಾತಾವರಣದ ಅಗತ್ಯವನ್ನು ಇತ್ತೀಚೆಗೆ ಒತ್ತುಕೊಟ್ಟು ಮತ್ತೆ ಮತ್ತೆ ಮಾತನಾಡುತ್ತಿರುವಿರಿ. ಈ ಮಾತನ್ನು ವಿಸ್ತರಿಸುವಿರಾ?**

ಅದೇಕೊ ಅನಿವಾರ್ಯ ಅನಿಸತೊಡಗಿದೆ. ಅಮೆರಿಕಾದ ಕಾವ್ಯದ ಹುಚ್ಚಿನ ಪ್ರೊಫೆಸರ್ ಜೊಸೆಫ್ ಟಿ. ಥಾಮಸ್ (ಜೂನಿಯರ್) ಮಕ್ಕಳ ಕಾವ್ಯವನ್ನು ಕೂಡ ಒಟ್ಟು ಕಾವ್ಯದೊಂದಿಗೆ ಇಟ್ಟೇ ನೋಡಬೇಕು